ದೇಶದ ಗಡಿ ದಾಟಿದ ಸಗಣಿಯಿಂದ ವಿದ್ಯುತ್ ಉತ್ಪಾದಿಸುವ ತಂತ್ರಗಾರಿಕೆ

ಒಂದು ಗೋವಿನ ಸ್ಲರಿಯಿಂದ ಒಂದು ವರ್ಷದಲ್ಲಿ ಒಟ್ಟು 1000 ಕಿಲೋ ವ್ಯಾಟ್ ಗಂಟೆಗಳ ವಿದ್ಯುತ್ತನ್ನು ಪಡೆಯಬಹುದಾಗಿದೆ.

ಧರಣಿ ಮಂಡಲ
•ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಇಂದಿನ ದಿನಗಳಲ್ಲಿ ಸಗಣಿ ಎಂಬುದು ಕೇವಲ ಗೊಬ್ಬರಕ್ಕೆ ಮಾತ್ರ ಸೀಮಿತವಾಗದೇ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಎಷ್ಟರಮಟ್ಟಿಗೆ ಎಂದರೆ ಇದರ ವ್ಯಾಪ್ತಿ ದೇಶದ ಗಡಿಯನ್ನು ದಾಟುತ್ತಿದೆ. ಹೀಗಾಗಿ ಇಂದು ಸಗಣಿಯಿಂದ ಗೊಬ್ಬರವನ್ನಷ್ಟೇ ಅಲ್ಲದೆ ಬೆರಣಿ, ಆಟಿಕೆಗಳು, ದೇವರ ಮೂರ್ತಿಗಳು, ಅಲಂಕಾರಿಕ ವಸ್ತುಗಳು ಸೇರಿದಂತೆ ಸಾಕಷ್ಟು ಇನ್ನಿತರ ವಸ್ತುಗಳನ್ನು ತಯಾರಿಸಲಾಗುತ್ತಿದೆ. ಇದರೊಂದಿಗೆ ಸಗಣಿಯಿಂದ ಸೆರಾಮಿಕ್ಸ್, ಸಿಲಿಕಾ, ಸಿಲಿಕಾ ಬೇಸ್ಡ್ ಸೆಮಿಕಂಡಕ್ಟರ್‌ಗಳು ಅಥವಾ ಅರೆವಾಹಕಗಳು, ಜೈವಿಕ ಇಂಧನ, ಜೈವಿಕ ಅನಿಲ, ಬಯೋ ಪಾಲಿಮರ್, ಬಯೋಪೈಂಟ್ ಅಥವಾ ಬಣ್ಣ ಆಂಟುಗಳು, ಫಿಲ್ಲರ್ಸ್, ಸಸ್ಯಗಳ ಕೋಶಭಿತ್ತಿಗೆ ನಾರಿನ ಸ್ವರೂಪವನ್ನು ಕೊಡಲು ಕಾರಣವಾದ ಲಿಗ್ನಿನ್, ಕಾಗದ, ವಿದ್ಯುತ್ ಉತ್ಪಾದನೆ, ಇಟ್ಟಿಗೆಗಳು ಸೇರಿದಂತೆ ಸಾಕಷ್ಟು ಇನ್ನಿತರೆ ವಸ್ತುಗಳನ್ನು ತಯಾರಿಸಲಾಗುತ್ತಿದೆ. ಅದರಲ್ಲೆಲ್ಲಾ ಪ್ರಮುಖವಾಗಿ ಸಗಣಿಯಿಂದ ವಿದ್ಯುಚ್ಛಕ್ತಿ ಉತ್ಪಾದಿಸುವ ತಂತ್ರಗಾರಿಕೆ ಇಂದು ದೇಶದ ಎಲ್ಲೆಯನ್ನು ದಾಟಿ ನಮಗೆ ಸೆಡ್ಡು ಹೊಡೆಯುವಷ್ಟರ ಮಟ್ಟಿಗೆ ಬೆಳೆದು ನಿಂತಿದೆ.

ಭಾರತದ ಬೆನ್ನಿಗೆ ಸದಾ ಚೂರಿ ಹಾಕಲು ಕಾಯುತ್ತಿರುವ ಚೀನಾ ಮೊದಲ ಬಾರಿಗೆ ತನ್ನಲ್ಲಿರುವ ಒಟ್ಟು ಜೀವರಾಶಿ ಯೋಜನೆಗೆ ಜೀವ ತುಂಬಲು ಸಾಧ್ಯವಿರುವ ಎಲ್ಲವನ್ನೂ ಸಗಣಿಯ ಮೂಲಕ ಮಾಡಲು ಹೊರಟಿದೆ. ಇದಕ್ಕೆ ಸಂಬಂಧಿಸಿದ ಅತಿ ದೊಡ್ಡ ಎನರ್ಜಿ ಕನ್‌ಸ್ಟ್ರಕ್ಷನ್ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಿದ್ಧತೆಯನ್ನು ಮಾಡಿಕೊಂಡಿದ್ದು, ಈ ಯೋಜನೆಯ ಒಟ್ಟು ಸಾಮರ್ಥ್ಯ ಸುಮಾರು 9 ಮೆಗಾವ್ಯಾಟ್ ಆಗಿದೆ. ವಿಶೇಷವೆಂದರೆ ಇಷ್ಟು ಪ್ರಮಾಣದ ವಿದ್ಯುತ್ ಉತ್ಪಾದನೆಗೆ ಈ ಬಾರಿ ಅದು ಬಳಸುತ್ತಿರುವುದು ಸಗಣಿ ಮತ್ತು ಒಣಹುಲ್ಲಿನ ಕಚ್ಚಾ ವಸ್ತುಗಳನ್ನು. ಈ ಕಚ್ಚಾ ವಸ್ತುಗಳು ಕೆಲ ಸಂಸ್ಕರಣೆಯ ಹಂತದ ನಂತರ ವಿದ್ಯುತ್ ಉತ್ಪಾದನೆಗೆ ಬೇಕಾದ ಮಿಥೇನ್ ಆಗಿ ಪರಿವರ್ತನೆಗೊಳ್ಳುವುದು ಸಾಬೀತಾಗಿರುವುದರಿಂದ ಈ ಯೋಜನೆಗೆ ಅದು ಕೈಹಾಕಿದೆ ಎನ್ನಲಾಗಿದೆ. ಮುಂದಿನ ಹಂತಗಳಲ್ಲಿ ಜನರೇಟರ್ ನೇರವಿನೊಂದಿಗೆ ವಿದ್ಯುತ್ ಉತ್ಪಾದಿಸುವ ಕಾರ್ಯ ಪ್ರಗತಿಯಲ್ಲಿದೆಯಂತೆ. ಇಂತಹ ನವೀಕರಿಸಬಹುದಾದ ನೈಸರ್ಗಿಕ ಅನಿಲವನ್ನು ಡೇರಿ ಫಾರ್ಮ್‌ಗಳಲ್ಲಿ, ತ್ಯಾಜ್ಯ ನೀರಿನ ಘಟಕಗಳಲ್ಲಿ ಮತ್ತು ಗೊಬ್ಬರದ ಹೊಂಡಗಳಿಂದ ಪಡೆಯುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆಯಂತೆ.

ಚೀನಾದ ಈ ರೀತಿಯ ವಿದ್ಯುತ್ ಉತ್ಪಾದನೆಯು ಇಲ್ಲಿಯವರೆಗಿನ ಕಲ್ಲಿದ್ದಿಲಿನಿಂದ ಉತ್ಪಾದಿಸುತ್ತಿದ್ದ ವಿದ್ಯುತ್‌ಪ್ರಮಾಣವನ್ನು ಮೀರಿಸಲಿದೆಯಂತೆ. ಚೀನಾದ ಎಲೆಕ್ಟ್ರಿಸಿಟಿ ಕೌನ್ಸಿಲ್ ಪ್ರಕಾರ ದೇಶದಲ್ಲಿರುವ ಎಲ್ಲಾ ರೀತಿಯ ಉತ್ಪಾದನಾ ಘಟಕಗಳು ದೇಶದಲ್ಲೇ ಅತಿ ಹೆಚ್ಚಿನ ಪ್ರಮಾಣದ ವಿದ್ಯುತ್‌ನ್ನು ಬಳಸುತ್ತಿದ್ದು ದಿನದಿಂದ ದಿನಕ್ಕೆ ಈ ಬಳಕೆಯ ಪ್ರಮಾಣ ಗಣನೀಯವಾಗಿ ಏರಿಕೆಯಾಗುತ್ತಿದೆಯಂತೆ. ಮುಖ್ಯವಾಗಿ ಉತ್ಪಾದಿಸಲಾಗುತ್ತಿರುವವೈದ್ಯಕೀಯ ಉಪಕರಣಗಳು, ಎಲೆಕ್ಟ್ರಿಕ್ ಕಾರುಗಳು ಮತ್ತು ಪವನಶಕ್ತಿಯ ಉಪಕರಣಗಳು ಹೆಚ್ಚಿನ ಪ್ರಮಾಣದ ವಿದ್ಯುತ್ ಬಳಕೆಗೆ ಕಾರಣವಾಗಿವೆಯಂತೆ.

ವಿದ್ಯುತ್ ಉತ್ಪಾದಿಸುವ ಮತ್ತು ಸರಬರಾಜು ಮಾಡುವ ನಿಟ್ಟಿನಲ್ಲಿ ಹಸಿರುಮನೆ ಅನಿಲ ವಾತಾವರಣಕ್ಕೆ ಬಿಡುಗಡೆಯಾಗದಂತೆ ಮತ್ತು ಇಂಗಾಲದ ಪ್ರಮಾಣದ ಬಗ್ಗೆ ಹೆಚ್ಚಿನ ನಿಗಾ ಇಡುವುದು ಅತ್ಯವಶ್ಯಕ. ಆದರೆ ಸಗಣಿ ಮತ್ತು ಇನ್ನಿತರೆ ಡೇರಿ ಉದ್ಯಮದ ತ್ಯಾಜ್ಯದಿಂದ ಇಲ್ಲಿ ವಿದ್ಯುತ್ ಉತ್ಪಾದಿಸಲಾಗುತ್ತಿರುವುದರಿಂದ ಇದರ ಚಿಂತೆ ಇಲ್ಲದಂತಾಗಿದೆ. ಹೀಗೆ 2021ರ ಅಂತ್ಯದ ವೇಳೆಗೆ ಇಲ್ಲಿ ಉತ್ಪತ್ತಿಯಾಗಿರುವ ಪಳೆಯುಳಿಕೆ ರಹಿತ ಇಂಧನದ ಸಾಮರ್ಥ್ಯವು ಸುಮಾರು 1.12 ಶತ ಕೋಟಿ ಕಿಲೋ ವ್ಯಾಟ್‌ನ್ನು ತಲುಪಿದೆ. ಇದು ಕಲ್ಲಿದ್ದಲಿನಿಂದ ಉತ್ಪತ್ತಿಯಾಗುತ್ತಿದ್ದ ಸುಮಾರು 1.11 ಶತ ಕೋಟಿ ಕಿಲೋವ್ಯಾಟ್ ವಿದ್ಯುತ್‌ನ್ನು ಮೀರಿಸಿದೆ. ಹೀಗಾಗಿ ಪಳೆಯುಳಿಕೆ ರಹಿತ ವಿದ್ಯುತ್ ಶಕ್ತಿಯ ಪ್ರಮಾಣವು ಚೀನಾದಲ್ಲಿ ವರ್ಷದಿಂದ ವರ್ಷಕ್ಕೆ ಸುಮಾರು ಶೇಕಡಾ 12ರಷ್ಟು ಹೆಚ್ಚಳವನ್ನು ಕಾಣುವಂತಾಗಿದೆ. ಇದರಲ್ಲಿ ಸೌರ ಶಕ್ತಿ ವಿದ್ಯುತ್ ಉತ್ಪಾದನೆಯು ಶೇಕಡಾ 25.2 ರಷ್ಟಾದರೆ, ಪವನ ಶಕ್ತಿ ವಿದ್ಯುತ್ ಉತ್ಪಾದನೆಯು ಸುಮಾರು ಶೇಕಡಾ 40.5ರಷ್ಟು ಹೆಚ್ಚಾಗಿದೆ. ಇದರಿಂದ ಇಲ್ಲಿಯವರೆಗೂ ವಿದ್ಯುತ್ ಉತ್ಪಾದನೆಯ ಮೂಲವಾಗಿದ್ದ ಕಲ್ಲಿದ್ದಲು ತನ್ನ ಸ್ಥಾನವನ್ನು ಸಗಣಿಗೆ ಬಿಟ್ಟುಕೊಡಬೇಕಾದ ಅನಿವಾರ್ಯತೆ ಬರಬಹುದು ಎಂಬುದಾಗಿ ಅಲ್ಲಿಯ ವೈಜ್ಞಾನಿಕರು ಅಭಿಪ್ರಾಯ ಪಡುತ್ತಿದ್ದಾರೆ.

ಬ್ರಿಟನ್‌ನಲ್ಲೂ ವಿದ್ಯುತ್ ಉತ್ಪಾದಿಸಲು ಗೋವಿನ ಸಗಣಿಯನ್ನು ಬಳಸುತ್ತಿರುವುದು ಕಂಡುಬಂದಿದೆ. ಇಲ್ಲಿಯ ರೈತರು ಗೋವಿನ ಸಗಣಿಯಿಂದ ವಿದ್ಯುತ್ ಉತ್ಪಾದಿಸುವ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಸಗಣಿಯಿಂದ ಒಂದು ರೀತಿಯ ಪುಡಿಯನ್ನು ಸಿದ್ಧಪಡಿಸಿದ್ದು, ಇದನ್ನು ಬಳಸಿ ಬ್ಯಾಟರಿ ತಯಾರಿಸುತ್ತಿದ್ದಾರೆ. ಮತ್ತೊಂದು ಪ್ರಯೋಗದಲ್ಲಿ ಒಂದುಕೆಜಿ ಸಗಣಿಯಿಂದ ಐದು ಗಂಟೆಗಳ ಕಾಲ ವ್ಯಾಕ್ಯೂಮ್ ಕ್ಲೀನರ್ ನಡೆಸುವಷ್ಟು ವಿದ್ಯುತ್ ಉತ್ಪಾದಿಸುತ್ತಿರುವುದು ವರದಿಯಾಗಿದೆ.

ಒಂದು ಸಮೀಕ್ಷೆಯ ಪ್ರಕಾರ ಒಂದು ಗೋವಿನ ಸ್ಲರಿಯಿಂದ ಒಂದು ವರ್ಷದಲ್ಲಿ ಒಟ್ಟು 1000 ಕಿಲೋ ವ್ಯಾಟ್ ಗಂಟೆಗಳ ವಿದ್ಯುತ್ತನ್ನು ಪಡೆಯಬಹುದಾಗಿದೆ. ಇಷ್ಟು ಪ್ರಮಾಣದ ವಿದ್ಯುತ್ ಸುಮಾರು 600 ಕಿಲೋ ಗ್ರಾಂಗಳಷ್ಟು ಹಸಿರುಮನೆ ಅನಿಲದ ಉತ್ಪಾದನೆಯನ್ನು ಕಡಿತ ಮಾಡುತ್ತದೆ. ಇದು ಕಲ್ಲಿದ್ದಲು ಚಾಲಿತ ವಿದ್ಯುತ್ ಕೇಂದ್ರವು ಎರಡು ಸೆಕೆಂಡುಗಳಲ್ಲಿ ಹೊರಸೂಸುವಮೊತ್ತಕ್ಕೆ ಅನುರೂಪವಾಗಿದೆ ಎನ್ನಲಾಗಿದೆ. ಜರ್ಮನಿಯ ಕೃಷಿ ಸಚಿವಾಲಯದ ಪ್ರಕಾರ ಇಷ್ಟು ಪ್ರಮಾಣದ ವಿದ್ಯುತ್ ಪಡೆಯಲು ಸುಮಾರು 1000 ಗಂಟೆಗಳ ಮಳೆ ಅವಶ್ಯಕವಿದೆ. ಒಂದು ಸಣ್ಣ ಗೋವಿನ ಹಿಂಡಿನಿಂದ ಸಿಗುವ ಸಗಣಿ ಗೊಬ್ಬರವನ್ನು ಅಂದರೆ ಸುಮಾರು 25 ಜಾನುವಾರುಗಳಿಂದ ದೊರೆಯುವ ಸಗಣಿಯನ್ನು ಸರಿಯಾದ ಪ್ರಮಾಣದಲ್ಲಿ ಬಳಸಿದ್ದೇ ಆದಲ್ಲಿ ಅದರಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯು ಸರಾಸರಿ ಏಳು ಕುಟುಂಬಗಳಿಗೆ ಒಂದುವರ್ಷಕ್ಕೆ ಸಾಕಾಗುವಷ್ಟು ವಿದ್ಯುತ್ತನ್ನು ಪೂರೈಸುವುದು ದೃಢಪಟ್ಟಿದೆ.

ಹವಾಮಾನ ಸ್ನೇಹಿ ಮತ್ತು ಸುಸ್ಥಿರ ಶಕ್ತಿಗೆ ಸಗಣಿ ಗೊಬ್ಬರವು ಪ್ರಮುಖ ಕೊಡುಗೆಯನ್ನು ನೀಡುವುದರ ಜೊತೆಗೆ ಅದರ ಇತರ ತ್ಯಾಜ್ಯಗಳನ್ನು ಬಳಸಿಕೊಂಡು ಸಹ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾಗಿದೆ. ಜೈವಿಕ ಅನಿಲ ಸ್ಥಾವರದಲ್ಲಿನ ಕಾಂಪೋಸ್ಟ್ ಬಿನ್ ಸುಮಾರು ನಾಲ್ಕು ಕಿಲೋ ವ್ಯಾಟ್ ವಿದ್ಯುತ್ತನ್ನು ಒದಗಿಸುವಲ್ಲಿ ಶಕ್ತವಾಗಿದೆ ಎಂದು ಹೇಳಲಾಗುತ್ತದೆ. ಹಾಗೆಯೇ ಸುಮಾರು 330 ಕೆಜಿ ತೂಗುವ ಒಣ ಹುಲ್ಲಿನ ಬೇಲ್‌ಗಳು ಅಥವಾ ರೋಲ್‌ಗಳು ಒಂದು ಕುಟುಂಬಕ್ಕೆ ಒಂದು ವರ್ಷದವರೆಗೆ ಅಡುಗೆ ಮಾಡಲು ಸಾಕಾಗುವಷ್ಟು ಶಕ್ತಿಯನ್ನು ಒದಗಿಸುವುದು ಸಾಬೀತಾಗಿದೆ. ಹೀಗಾಗಿ ಇಂದು ಜರ್ಮನಿಯಿಂತಹ ನವೀಕರಿಸಬಹುದಾದ ಇಂಧನವಾದ ಸೌರಶಕ್ತಿ, ಜೀವರಾಶಿ, ಗಾಳಿ ಮತ್ತು ಜಲವಿದ್ಯುತ್ ಸೇರಿದಂತೆ ಇನ್ನಿತರೆ ಶಕ್ತಿಯ ಮೂಲಗಳನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸುವಲ್ಲಿ ಮುಂಚೂಣಿಯಲ್ಲಿದ್ದು ದಿನದಿಂದ ದಿನಕ್ಕೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ.

ಸಮಾಜದಲ್ಲಿ ಹೆಚ್ಚುತ್ತಿರುವ ಬೇಡಿಕೆಗಳಿಂದಾಗಿ ವಿದ್ಯುತ್ ಕ್ಷೇತ್ರವು ಇಂದು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಹೀಗಾಗಿ ಇಂದು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಉತ್ತಮ ಮತ್ತು ಹೆಚ್ಚು ಆರ್ಥಿಕ ವಿಧಾನದ ಅಗತ್ಯವಿರುವುದು ಎದ್ದುಕಾಣುತ್ತಿದೆ. ಇಂತಹ ಸಂದರ್ಭದಲ್ಲಿ ಗೋವಿನ ಸಗಣಿಯು ಕೈಗೆಟುಕುವ ವಿದ್ಯುಚ್ಛಕ್ತಿಯ ಮೂಲವಾಗಿ ಕಂಡುಬಂದಿರುವುದು ಆಶಾದಾಯಕವಾಗಿದೆ. ಕೆಲವೊಂದು ಕಡೆ ಇದರಿಂದ ಉತ್ಪತ್ತಿಯಾಗುವ ವಿದ್ಯುತ್ತಿನಲ್ಲಿ ಪ್ರವಾಹವು ಸಾಕಾಗುವುದಿಲ್ಲ ಎನ್ನಲಾಗಿದ್ದು, ಇದಕ್ಕೆ ಗೊಬ್ಬರ ಹಾಗೂ ಕಾಂಪೋಸ್ಟ್ ನಂತಹ ಹೆಚ್ಚಿನ ವಾಹಕತೆಯನ್ನು ಹೊಂದಿರುವ ಕೆಲವು ಪದಾರ್ಥಗಳನ್ನು ಸೇರಿಸುವ ಮೂಲಕ ಇದನ್ನು ಹೆಚ್ಚಿಸಬಹುದು ಎನ್ನಲಾಗಿದೆ. ಈ ದಿಕ್ಕಿನಲ್ಲಿ ಇಂದು ದೇಶ ವಿದೇಶಗಳಲ್ಲಿ ಹಲವು ಪ್ರಯೋಗಗಳು ನಡೆಯುತ್ತಿವೆ. ಭಾರತದಲ್ಲಿ ಇದರ ಕುರಿತಂತೆ ಇತರೆ ರಾಜ್ಯಗಳಿಗೆ ಹೋಲಿಸಿದಲ್ಲಿ ಛತ್ತೀಸ್‌ಗಢ್ ಮುಂದಿದೆ.

ಛತ್ತೀಸ್‌ಗಢ್ ಅನುಷ್ಠಾನಗೊಳಿಸಿರುವ ಗೋಧನ್ ನ್ಯಾಯ್ ಯೋಜನೆಯ ಮೂಲಕ ಸಗಣಿ ಗೊಬ್ಬರದಿಂದ ವಿದ್ಯುತ್ತನ್ನು ಉತ್ಪಾದಿಸುವಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಗೋವಿನ ಸಗಣಿಯನ್ನು ಪ್ರತಿ ಕೆಜಿಗೆ ಎರಡು ರೂಪಾಯಿಯಂತೆ ಖರೀದಿಸುವ ಯೋಜನೆ ಇಲ್ಲಿ ಯಶಸ್ವಿಯಾಗಿದ್ದು, ಈಗ ಸಗಣಿಯಿಂದ ವಿದ್ಯುತ್ ಉತ್ಪಾದಿಸುವ ಯೋಜನೆಯು ಯಶಸ್ವಿಯಾಗುವ ಎಲ್ಲಾ ಲಕ್ಷಣಗಳು ಗೋಚರಿಸಲಾರಂಭಿಸಿವೆ. ಈ ಮೂಲಕ ಹಸಿರು ಇಂಧನವನ್ನು ಕಡಿತಗೊಳಿಸುವ ಹಲವು ಯೋಜನೆಗಳಿಗೆ ಇಲ್ಲಿ ಈಗಾಗಲೇ ಚಾಲನೆಯನ್ನು ನೀಡಲಾಗಿದ್ದು, ಮುಖ್ಯವಾಗಿ ಗೋವಿನ ಸಗಣಿಯಿಂದ ವಿದ್ಯುತ್ ತಯಾರಿಸುವ ಮೂಲಕ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸುವತ್ತ ದಿಟ್ಟ ಹೆಜ್ಜೆಯನ್ನಿಡಲಾಗಿದೆ. ಇಲ್ಲಿಯಬೆಮೆತಾರ ಜಿಲ್ಲಾಸ್ಪತ್ರೆಯಲ್ಲಿ ಈ ಮಹತ್ವಾಕಾಂಕ್ಷಿ ಮತ್ತು ಐತಿಹಾಸಿಕ ಯೋಜನೆಗೆ ಹಿಂದಿನ ಮುಖ್ಯಮಂತ್ರಿಯಾಗಿದ್ದ ಭೂಪೇಶ್ ಸಿಂಗ್ ಬಘೇಲ್ ಚಾಲನೆ ನೀಡಿದ್ದನ್ನು ಸ್ಮರಿಸಬಹುದಾಗಿದೆ.

Hosadiganta pg 10

ಕ್ವಿಂಟಲ್ ದರ ₹32 ಸಾವಿರಕ್ಕೆ ಏರಿಕೆ: ಬೆಳೆಗಾರರಲ್ಲಿ ಸಂತಸ ಹೆಚ್ಚಳ

ಹುಣಸೆ ಹಣ್ಣಿಗೆ ದಾಖಲೆ ಬೆಲೆ

ಪ್ರಜಾವಾಣಿ ವಾರ್ತೆ

ತುಮಕೂರು: ಈ ಬಾರಿ ಹುಣಸೆ ಹಣ್ಣಿಗೆ ಶುಕ್ರದೆಸೆ ಆರಂಭವಾಗಿದ್ದು, ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುತ್ತಿದೆ. ನಗರದ ಎಪಿಎಂಸಿಯಲ್ಲಿ ಸೋಮವಾರ ಕ್ವಿಂಟಲ್ ಹುಣಸೆ ₹32 ಸಾವಿರದವರೆಗೂ ಮಾರಾಟವಾಗಿದೆ. ಈ ಬೆಳವಣಿಗೆ ಬೆಳೆಗಾರರಲ್ಲಿ ನಗು ಮೂಡಿಸಿದೆ.

ಉತ್ತಮ ಗುಣಮಟ್ಟದ ಹುಣಸೆ ಹಣ್ಣು ಕ್ವಿಂಟಲ್‌ಗೆ ಕನಿಷ್ಠ ₹13 ಸಾವಿರದಿಂದ ಗರಿಷ್ಠ ₹32 ಸಾವಿರದವರೆಗೂ ಮಾರಾಟವಾಗಿದೆ. ಮಧ್ಯಮ ಗುಣಮಟ್ಟದ ಹಣ್ಣನ್ನು ಕ್ವಿಂಟಲ್‌ಗೆ ₹7 ಸಾವಿರದಿಂದ ₹9 ಸಾವಿರ ಹಾಗೂ ಗೋಟು ಹಣ್ಣು ₹2,600ರಿಂದ ₹2,700ರವರೆಗೂ ವರ್ತಕರು ಖರೀದಿಸಿದ್ದಾರೆ.


ಹಿಂದಿನ ವರ್ಷವೂ ಆರಂಭದ ದಿನಗಳಲ್ಲಿ ಉತ್ತಮ ಬೆಲೆ ಸಿಕ್ಕಿತ್ತು. ಕಳೆದ ವರ್ಷದ ಇದೇ ಹೊತ್ತಿಗೆ ಕ್ವಿಂಟಲ್ ಹುಣಸೆ ಗರಿಷ್ಠ ₹26 ಸಾವಿರದವರೆಗೂ ಮಾರಾಟವಾಗಿತ್ತು. ಆವಕ ಹೆಚ್ಚಿದಂತೆ ಹಾಗೂ ಹಣ್ಣಿನ ಗುಣಮಟ್ಟ ಕುಸಿದಂತೆ ಧಾರಣೆಯೂ ಇಳಿಕೆ ಕಂಡಿತ್ತು.

ಮುಖ್ಯಾಂಶಗಳು

- 2020ರಲ್ಲಿ ಕ್ವಿಂಟಲ್ ಹುಣಸೆಗೆ ₹35 ಸಾವಿರ ಸಿಕ್ಕಿದ ಧಾರಣೆ
- ಇಳುವರಿ ಕಡಿಮೆ ಆಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣ
- ಮುಂದಿನ ದಿನಗಳಲ್ಲೂ ಉತ್ತಮ ಧಾರಣೆ ಸಿಗುವ ಸೂಚನೆ

ಸರಾಸರಿ ಕ್ವಿಂಟಲ್ ₹13 ಸಾವಿರದಿಂದ ₹20 ಸಾವಿರದವರೆಗೂ ಮಾರಾಟವಾಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಉತ್ತಮ ಬೆಲೆ ಸಿಗುತ್ತಿದೆ. 2020ರಲ್ಲಿ ದಾಖಲೆಯ ಬೆಲೆ ಸಿಕ್ಕಿದ್ದು ಕ್ವಿಂಟಲ್ ₹35 ಸಾವಿರದವರೆಗೂ ಏರಿಕೆಯಾಗಿತ್ತು. ನಂತರದ ವರ್ಷಗಳಲ್ಲಿ ಇಳಿಕೆಯತ್ತ ಮುಖ ಮಾಡಿತ್ತು. ಹಿಂದಿನ ಎರಡು ವರ್ಷಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಲೆ ಕುಸಿತವಾಗಿತ್ತು.

ಖರೀದಿಗೆ ಬಂದ ಆಂಧ್ರ, ತಮಿಳುನಾಡಿನ ವರ್ತಕರು: ಆಂಧ್ರಪ್ರದೇಶ ಹಾಗೂ ತಮಿಳುನಾಡಿನಿಂದ ಬಂದಿದ್ದ ವರ್ತಕರು ಖರೀದಿಯಲ್ಲಿ ಭಾಗವಹಿಸಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ಆಂಧ್ರಪ್ರದೇಶದ ವಿಜಯವಾಡಕ್ಕೆ ಸಾಗಣೆ ಮಾಡಲಾಗುತ್ತಿದ್ದು, ಅಲ್ಲಿನ ಶೀತಲಗೃಹದಲ್ಲಿ ಇಟ್ಟು ನಂತರ ಚಿಲ್ಲರೆ ಮಾರಾಟಕ್ಕೆ ಬಿಡುಗಡೆ ಮಾಡಲಾಗುತ್ತದೆ.



ಹುಣಸೆ ಹಣ್ಣು

ಏರಿಕೆಗೆ ಕಾರಣ: ಈ ಬಾರಿ ಹುಣಸೆ ಹಣ್ಣಿನ ಇಳುವರಿ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಸಲ ಶೇ 30ರಿಂದ ಶೇ 40ರಷ್ಟು ಬೆಳೆ ರೈತರ ಕೈಸೇರಿದೆ. ಇಳುವರಿ ಕುಸಿತ, ಮಾರುಕಟ್ಟೆಯಲ್ಲಿ ಆವಕ ತಗ್ಗಿರುವುದು ಹಾಗೂ ಖರೀದಿ ಬೇಡಿಕೆಯೆಂದಾಗಿ ಧಾರಣೆ ಹೆಚ್ಚುವಂತೆ ಮಾಡಿದೆ.

ಫೆಬ್ರುವರಿ ಮಧ್ಯ ಭಾಗದಿಂದ ಎಪಿಎಂಸಿ ಮಾರುಕಟ್ಟೆಗೆ ಹುಣಸೆ ಹಣ್ಣು ಬರುತ್ತಿದ್ದು, ಆರಂಭದಿಂದಲೂ ಉತ್ತಮ ಬೆಲೆ ಸಿಗುತ್ತಿದೆ. ಇನ್ನೂ ಎರಡು ತಿಂಗಳು ವಹಿವಾಟು ನಡೆಯಲಿದೆ. ಮಾರ್ಚ್ ತಿಂಗಳಲ್ಲಿ ಹುಣಸೆ ವಹಿವಾಟು ಬಿರುಸು ಪಡೆದುಕೊಳ್ಳುತ್ತದೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ಧಾರಣೆ ಸಿಗುವ ಸೂಚನೆ ಕಾಣಿಸುತ್ತಿವೆ ಎಂದು ವರ್ತಕ ದೇವೇಂದ್ರಪ್ಪ ಹೇಳುತ್ತಾರೆ.

ಆರಂಭದಲ್ಲಿ ಐದಾರು ಲೋಡ್ ಬರುತ್ತಿದ್ದ ಹಣ್ಣು ನಿಧಾನವಾಗಿ ಏರಿಕೆಯಾಗುತ್ತಿದ್ದು, ಸೋಮವಾರ 10 ಲೋಡ್ (ಸುಮಾರು 100 ಟನ್) ಬಂದಿತ್ತು. ಮುಂಗಾರು ಮಳೆಗೆ ಮುನ್ನವೇ ಮಾರಾಟ ಮಾಡಬೇಕಿದ್ದು, ಮಾರ್ಚ್ ತಿಂಗಳಲ್ಲಿ ಇದೇ ಪ್ರಮಾಣದಲ್ಲಿ ಆವಕ ಆಗಬಹುದು ಎಂದು ಹೇಳಲಾಗುತ್ತಿದೆ.

Prajavani pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in

ಹೆಬ್ಬಲಸು: ಹೆಸರು ಮಾತ್ರ ಹಿರಿದು, ಗಾತ್ರದಲ್ಲಿ ಕಿರಿದು!

ಹೆಸರಿಗೆ ಹೆಬ್ಬಲಸು, ಅಂದರೆ ಹಿರಿದಾದ ಹಲಸು. ನೋಡಲು ಥೇಟ್ ಹಲಸಿನ ಹಣ್ಣಿನಂತೆಯೇ ಇರುತ್ತದೆ, ಆದರೆ ಗಾತ್ರ ಮಾತ್ರ ಬಹು ಕಿರಿದು. ಮಾವಿನ ಹಣ್ಣಿನ ಗಾತ್ರದ ಈ ಹಣ್ಣುಗಳ ಒಳಗೆ, ಹಲಸಿನ ರೀತಿಯ ತೊಳೆಗಳು. ಸಾಕಷ್ಟು ರುಚಿಕರ. ಇಂಥ ಅಪರೂಪದ ಹಣ್ಣುಗಳು ನಮ್ಮ ರಾಜ್ಯದಲ್ಲಿ ಬೆಳೆಯುತ್ತವೆ ಎಂಬುದು ಹೆಮ್ಮೆಯ ವಿಚಾರವೇ ಸರಿ.



ಶಶಾಂಕಣ

ಶಶಿಧರ ಹಾಲಾಡಿ

vveditoped@gmail.com

ಇನ್ನೇನು ಬೇಸಗೆಯ ದಿನಗಳು ಹತ್ತಿರವಾದವು, ಹಲವು ರೀತಿಯ ಹಣ್ಣುಗಳನ್ನು ಸ್ವಾಗತಿಸಲು ನಾವೆಲ್ಲಾ ಸಿದ್ಧರಾಗಬಹುದು. ನಗರದಲ್ಲಿರುವವರಿಗೆ ಕಲ್ಲಂಗಡಿ, ದೋಸ ಕಾಯಿ, ಮಸ್ಕ್ ಮೆಲನ್ ಮೊದಲಾದ ಹಣ್ಣುಗಳು ಬೇಸಗೆಯಲ್ಲಿ ಹಿತವೆನಿಸಬಹುದು, ಅಂಗಡಿಗಳಲ್ಲಿ ಖರೀದಿಸಲು ಕೂಡ ಲಭ್ಯ. ಬಹು ಹಿಂದೆ, ಮರಗಿಡಗಳಿಂದಲೇ ಸುತ್ತುವರಿದಿರುವ ಹಳ್ಳಿಗಳಲ್ಲಿ, ಬೇಸಗೆ ಬಂತೆಂದರೆ ನಾನಾ ವೈವಿಧ್ಯ ಹೊಂದಿರುವ ಹಣ್ಣುಗಳು ಲಭ್ಯವಾಗುತ್ತಿದ್ದುದು ಕಾಡಿನಲ್ಲಿ ಅಥವಾ ಕಾಡಂಚಿನ ತೋಟಗಳಲ್ಲಿ! ಸೂರ್ಯನ ತಾಪ ಮೇಲೇರುತ್ತಿರುವಂತೆಯೇ, ಅತ್ತ ಕಾಡು ಮರಗಳಲ್ಲಿದ್ದ ಹಣ್ಣುಗಳು ಮಾಗುತ್ತಿದ್ದವು, ಬಣ್ಣ ತಳೆಯುತ್ತಿದ್ದವು, ಮಂಗ ಮತ್ತು ಇತರ ಕಾಡುಪ್ರಾಣಿಗಳ ಮತ್ತು ಗ್ರಾಮೀಣರ ಹೊಟ್ಟೆಯನ್ನು ತುಂಬಿಸುತ್ತಿದ್ದವು.

ಅಂಥದೊಂದು ಹಣ್ಣೆಂದರೆ ಹೆಬ್ಬಲಸು. ಇದರ ಹೆಸರನ್ನು ವಿಶ್ಲೇಷಿಸುತ್ತಾ ಹೋದರೆ, ವಿರುದ್ಧಾರ್ಥ ಹೊಮ್ಮುತ್ತದೆ! ಹೆಸರಿಗೆ ಹೆಬ್ಬಲಸು, ಆಂದರೆ ಹಿರಿದಾದ ಹಲಸು; ಆದರೆ ಇದರ ಹಣ್ಣು ಗಾತ್ರದಲ್ಲಿ ತುಂಬಾ ಕಿರಿದು. ಕಾಡಿನಲ್ಲಿ ಬೆಳೆಯುವ ಬೃಹತ್ ಗಾತ್ರದ ಮರದಲ್ಲಿ ಸಣ್ಣ ಹಣ್ಣು ಬಿಡುವ ಹೆಬ್ಬಲಿಸಿನ ಪರಿಚಯ ನಮ್ಮ ರಾಜ್ಯದ ಕೆಲವೇ ಪ್ರದೇಶದ ಜನರಿಗೆ ಇದೆ. ಕರಾವಳಿ ಮತ್ತು ಮಲೆನಾಡಿನ ಕೆಲವು ಭಾಗಗಳನ್ನು ಹೊರತುಪಡಿಸಿದರೆ, ಕಿರಿಯ ಹಣ್ಣಾದ 'ಹೆಬ್ಬಲಸು' ಅಷ್ಟೊಂದು ಪರಿಚಿತವಲ್ಲ. ಹಲಸಿನ ತಂಗಿಯಂತಿರುವ ಈ ಹಣ್ಣು ರುಚಿಕರ; ಇದರ ಮರವು ಹಲಸಿಗಿಂತ ದೊಡ್ಡದು, ಎತ್ತರ; ಹಲಸಿನ ಮರದ, ಎಲೆಗಳ ಮತ್ತು ಹಣ್ಣಿನ ಹೋಲಿಕೆ ಇದೆ. ಹಲಸಿನ ಮರದ ರೀತಿಯೇ, ಹೆಬ್ಬಲಸಿನ ಮರದ ನಾಟಾದಿಂದ ಪೀಠೋಪಕರಣಗಳನ್ನು ಸಹ ತಯಾರಿಸಬಹುದು. ಹಳದಿ ಮತ್ತು ಹೊಂಬಣ್ಣವನ್ನು ಹೊಂದಿರುವ ಈ ನಾಟಾದಿಂದ ತಯಾರಿಸಿದ ಪೀಠೋಪಕರಣಗಳು ಅಕ್ಷರಶಃ ನೂರಾರು ವರ್ಷ ಬಾಳಿಕೆ ಬರುತ್ತವೆ!

ನನ್ನ ಬಾಲ್ಯಕಾಲದ ಅತಿ ಪ್ರೀತಿಯ ಹಣ್ಣುಗಳಲ್ಲಿ ಹೆಬ್ಬಲಸೂ ಸೇರಿದೆ. ಜತೆಗೆ ಬಿರು ಬೇಸಗೆಯಲ್ಲಿ, ಶಾಲೆಗಳಿಗೆ ರಜಾ ಇರುವ ಕಾಲದಲ್ಲೇ ಹಣ್ಣಾಗುವ ಹೆಬ್ಬಲಿಸಿನ ಹಣ್ಣನ್ನು ತಿನ್ನುವುದೆಂದರೆ, ಮಕ್ಕಳಿಗೆ ಖುಷಿ. ಹಲಸಿನ ಸಿಪ್ಪೆಯನ್ನೇ ಹೋಲುವ, ಹೊರ ಭಾಗದ ಮುಳ್ಳು ಮುಳ್ಳು ಸಿಪ್ಪೆಯನ್ನು ನಿಧಾನವಾಗಿ ಕೈಯಿಂದಲೇ ಕಿತ್ತು ತೆಗೆದಾಗ, ಮಧ್ಯದ 'ಗೂಂಜು' ಎಂಬ ಭಾಗಕ್ಕೆ ಅಂಟಿಕೊಂಡ ಐವತ್ತಕ್ಕೂ ಹೆಚ್ಚು ತೊಳೆಗಳು; ಕೆಲವು ತಳಿಗಳಲ್ಲಿ ಕೆಲವೇ ತೊಳೆಗಳು ಇರುವುದುಂಟು. ಎಲ್ಲಾ ತೊಳೆಗಳೂ ಬಂಗಾರದ ಬಣ್ಣ; ಒಳಗೊಂದು ಬಿಳಿ ಬೀಜ. ಬಾಯಿಗೆ ಹಾಕಿಕೊಂಡು ತೊಳೆಯ ಭಾಗವನ್ನು ನಿಧಾನವಾಗಿ ಚೀಪಿ ತಿಂದು, ಬೀಜವನ್ನು ಉಗುಳಬೇಕು. ಮಾಗಿದ ಹೆಬ್ಬಲಸು ಸಿಕ್ಕರೆ, ಒಮ್ಮೆಗೇ ನಾಲ್ಕಾರು ಹಣ್ಣುಗಳನ್ನು ತಿನ್ನುವ ಅವಕಾಶ; ಅಷ್ಟೊಂದು ರುಚಿಕರ ಈ ಹಣ್ಣು.

ಕಾಡಿನ ಅಂಚಿನಲ್ಲೋ, ತೋಟದ ಬೇಲಿಯ ಭಾಗದಲ್ಲೋ ಅಥವಾ ಕಾಡಿನ ಮಧ್ಯೆಯೋ ತಮ್ಮಷ್ಟಕ್ಕೆ ಬೆಳೆದುಕೊಂಡಿರುವ ಹೆಬ್ಬಲಸಿನ ಮರಗಳಲ್ಲಿ, ಸಣ್ಣ ಪ್ರಮಾಣದ ವೈವಿಧ್ಯ ಇದೆ. ಅಂದರೆ, ಎಲ್ಲಾ ಹೆಬ್ಬಲಸಿನ ಮರಗಳ ಹಣ್ಣುಗಳು ಒಂದೇ ರೀತಿ ಇರುವುದಿಲ್ಲ; ಗಾತ್ರದಲ್ಲಿ, ಬಣ್ಣದಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ. ಮರದ ಗಾತ್ರದಲ್ಲಿ ಸಹ ವೈವಿಧ್ಯ ಇದೆ. ಕೆಲವು ಮರಗಳು ಐವತ್ತು ಅಡಿ ಎತ್ತರವಿದ್ದರೆ, ಇನ್ನು ಕೆಲವು ಇಪ್ಪತ್ತರಿಂದ ಮೂವತ್ತು ಅಡಿ ಬೆಳೆದು, ಸುತ್ತಲೂ ರೆಂಬೆ ಕೊಂಬೆಗಳನ್ನು ಹರಡಿಕೊಂಡಿರುತ್ತವೆ. ಕೆಲವು ಮರಗಳ ಹಣ್ಣುಗಳ ರುಚಿ ಅನುಪಮ ಎನಿಸಿದರೆ, ಇನ್ನು ಕೆಲವು ಮರಗಳ ಹಣ್ಣುಗಳು ತುಸು ಸಪ್ಪೆ ಇರಲೂಬಹುದು; ಕೆಲವು ಮರಗಳ ಕಾಯಿಗಳು ಸರಿಯಾಗಿ ಹಣ್ಣಾಗುವುದಿಲ್ಲ ಅಥವಾ ಅತಿಯಾಗಿ ಹಣ್ಣಾಗಿ ತೊಳೆಗಳು ಅಷ್ಟೊಂದು ರುಚಿ ಇರುವುದಿಲ್ಲ. ತೊಳೆಗಳ ಬಣ್ಣದಲ್ಲೂ, ತೊಳೆಗಳ ಸಂಖ್ಯೆಯಲ್ಲೂ ವ್ಯತ್ಯಯ ಇರಬಹುದು.



ನಮ್ಮ ಹಳ್ಳಿ ಮನೆಯ ಹಿಂಭಾಗದ ಮಣ್ಣಿನ ದರೆಯನ್ನು ಹತ್ತಿಹೋದರೆ, ತಕ್ಷಣ ಎರಡು ಭಾರಿ ಗಾತ್ರದ ಹೆಬ್ಬಲಸಿನ ಮರಗಳು ಇದ್ದವು; ಇನ್ನೂ ಸ್ವಲ್ಪ ಮುಂದೆ ನಡೆದರೆ, ಇನ್ನೆರಡು ಮರಗಳಿದ್ದವು. ಮೊದಲು ಸಿಗುವ ಜೋಡಿ ಮರಗಳಿಗೂ, ನಂತರ ಎದುರಾಗುವ ಜೋಡಿಗೂ ಸ್ವರೂಪ, ಗಾತ್ರ, ಹಣ್ಣಿನ ರುಚಿಗಳಲ್ಲಿ ಸಾಕಷ್ಟು ವ್ಯತ್ಯಾಸ. ದರೆಗೆ ಅಂಟಿಕೊಂಡಂತಿರುವ, ಮೊದಲು ಸಿಗುವ ಎರಡೂ ಮರಗಳು ನೋಡಲು ಒಂದೇ ರೀತಿ; ಹೆಚ್ಚು ಕಡಿಮೆ ಅವಳಿ-ಜವಳಿ ಎಂದರೂ ನಡೆದೀತು, ಅವುಗಳ ಸ್ವರೂಪ, ಎತ್ತರ, ಕೊಂಬೆಗಳು ಹರಡಿರುವ ರೀತಿ. ಎರಡೂ ಸುಮಾರು 40ರಿಂದ 50 ಅಡಿ ಎತ್ತರ ಬೆಳೆದುಕೊಂಡಿವೆ; ಆ ಸುತ್ತಲಿನಲ್ಲೇ ಅವೆರಡೂ ಬೃಹದಾಕಾರದ ಮರಗಳು. ನೆಲದಿಂದ ಇಪ್ಪತ್ತು ಅಡಿಯ ತನಕ, ಯಾವುದೇ ಕೊಂಬೆಗಳಿಲ್ಲದೆ ನೇರವಾದ ಬೆಳೆದುಕೊಂಡು ಹೋಗಿದ್ದ ದಪ್ಪನೆಯ ಕಾಂಡ. ನಂತರ ವಿಶಾಲವಾಗಿ, ದೂರ ದೂರಕ್ಕೆ ಹರಡಿಕೊಂಡ ಕೊಂಬೆಗಳು. ಆ ಎರಡೂ ಮರಗಳಲ್ಲಿ ಪ್ರತಿವರ್ಷ ಅಕ್ಷರಶಃ ಸಾವಿರಾರು ಹಣ್ಣುಗಳು ಬಿಡುತ್ತಿದ್ದವು. ಅಂಬರದಲ್ಲಿ ವಿಶಾಲವಾಗಿ ಹರಡಿಕೊಂಡಿದ್ದ ಆ ಮರದ ರೆಂಬೆಗಳ ತುದಿಯಲ್ಲಿ ಬೆಳೆದಿದ್ದ ಆ ಸಾವಿರಾರು ಕಾಯಿಗಳನ್ನು, ಹಣ್ಣುಗಳನ್ನು ನೋಡುವುದೇ ಒಂದು ಆನಂದ.

ಆದರೆ ಆ ಬೃಹದಾಕಾರದ ಮರಗಳಲ್ಲಿ ಬಿಡುತ್ತಿದ್ದ ರುಚಿಕರ ಹಣ್ಣುಗಳನ್ನು ಕೊಯ್ದು ತಿನ್ನುವುದು ತುಸು ಕಷ್ಟ; ಏಕೆಂದರೆ, ಐವತ್ತು ಅಡಿಗಳಷ್ಟು ನೇರವಾಗಿ ಏರಿಹೋಗಿದ್ದ ಅದರ ಕಾಂಡವನ್ನು ಏರಲು ಎಂಟೆದೆ ಬೇಕು. ಕೊಕ್ಕೆಯಿಂದ ಕಾಯಿಗಳನ್ನು ಕೊಯ್ಯೋಣ ವೆಂದರೆ, ಅಷ್ಟು ಎತ್ತರದ ಕೊಕ್ಕೆಗಳೇ ನಮ್ಮನೆಯಲ್ಲಿ ಇರಲಿಲ್ಲ.

ಆದರೂ, ಆ ಎತ್ತರದ ಮರವನ್ನು ಏರಿ, ಕೌಶಲದಿಂದ ಅದರ ಕಾಯಿಗಳನ್ನು, ಹಣ್ಣುಗಳನ್ನು ಕಿತ್ತು ತರುವ ಕೆಲವು ಹಮ್ಮೀರರು ನಮ್ಮೂರಿನಲ್ಲಿ ಇದ್ದರು. ಅಷ್ಟು ಎತ್ತರದ ಮರ ಏರಿ, ಹೆಬ್ಬಲಸಿನ ಹಣ್ಣು ಕೊಯ್ಯಲು ಸಾಕಷ್ಟು ಸಿದ್ಧತೆಯೂ ಅಗತ್ಯ; ಹತ್ತಾರು 'ನ್ಯಾಗಾಳ' ಬೀಳುಗಳನ್ನು ಕಿತ್ತು, ಒಂದ ಕ್ಕೊಂದು ಗಂಟು ಹಾಕಿ, ಮೂವತ್ತರಿಂದ ನಲವತ್ತು ಅಡಿ ಉದ್ದದ ದಪ್ಪನೆಯ ದಾರವನ್ನು ತಯಾರಿಸಿ ಕೊಳ್ಳುತ್ತಿದ್ದರು; ಆ ರೀತಿ ಜೋಡಿಸಿದ ನಂತರ, ದೂರ ದಿಂದ ನೋಡಿದರೆ ಅದೊಂದು ಉದ್ದನೆಯ, ಕಪ್ಪ ನೆಯ ವಯರಿನ ರೀತಿ ಕಾಣಿಸುತ್ತಿತ್ತು. ಅದನ್ನು ಹಿಡಿದು, ಜಾಗರೂಕತೆಯಿಂದ ಮರವೇರಿ, ಬಂಗಾರದ ಬಣ್ಣದ ಹಣ್ಣನ್ನು ಕಿತ್ತು, 'ನ್ಯಾಗಾಳ' ಬಳಲಿನ ಒಂದು ತುದಿಗೆ ಕಟ್ಟಿ, ನಿಧಾನವಾಗಿ ಕೆಳಗೆ ಇಳಿಬಿಡುತ್ತಿದ್ದರು. ಕೆಳಗೆ ನಿಂತಿದ್ದ ನಾವೆಲ್ಲಾ ಅದನ್ನು ಕಲೆಕ್ಟ್ ಮಾಡಿಕೊಂಡು, ದಾರವನ್ನು ಪುನಃ ಮೇಲಕ್ಕೆ ಕಳಿಸುತ್ತಿದ್ದೆವು. ಇದೇ ರೀತಿ ಹತ್ತಾರು ಹಣ್ಣುಗಳನ್ನು ಕೆಳಗಿಳಿಸಿದ ನಂತರ, ಮರ ಹತ್ತಿದ ಹಮ್ಮೀರ ಕೆಳಗಿಳಿಯುತ್ತಿದ್ದ.

ನಂತರ, ಎಲ್ಲರೂ ಸುತ್ತಲೂ ಕುಳಿತು ಹೆಬ್ಬಲಸಿನ ಹಣ್ಣಿನ ಸಮಾರಾಧನೆ ನಡೆಸುವ ಕಾರ್ಯಕ್ರಮ! ಹಣ್ಣಾಗಿ, ಮೆತ್ತಗಾದ ಹೆಬ್ಬಲಸಿನ ಹಣ್ಣನ್ನು ಮರದ ತುದಿಯಿಂದ ಕೆಳಗೆ ಎಸೆದರೆ, ಪೂರ್ತಿ ಒಡೆದು, ತೊಳೆಗಳೆಲ್ಲಾ ಮಣ್ಣುಪಾಲಾಗುತ್ತವೆ. ಅಷ್ಟು ಮೆದು ಆ ಹಣ್ಣು; ಅದರ ಮೇಲ್ಭಾಗವು, ಹಲಸಿನ ಹಣ್ಣಿನ ಮೇಲ್ಭಾಗದಂತೆ ಮುಳ್ಳು ಮುಳ್ಳಾಗಿದ್ದರೂ, ನೆಲಕ್ಕೆ ಬಿದ್ದರೆ ತಕ್ಷಣ ಒಡೆದುಹೋಗುವಷ್ಟು ಮೆತ್ತಗಿರುತ್ತದೆ. ಆದ್ದರಿಂದಲೇ, ನ್ಯಾಗಾಳು ಬಳಲನ್ನು ಬಳಸಿ, ಹಣ್ಣುಗಳನ್ನು ಕೆಳಗಿಳಿಸುವ ಸಾಹಸ. ಅಷ್ಟು ಸಾಹಸಪಟ್ಟ ದ್ದಕ್ಕೂ ಸಾರ್ಥಕ ರುಚಿಕೊಡುವ ಕಾಯಿಗಳನ್ನು ಬಿಡುತ್ತಿದ್ದ ಆ ಎರಡು ಪುರಾತನ ಹೆಬ್ಬಲಸಿನ ಮರಗಳು ಇಂದಿಲ್ಲ.

ನೋಡಲು ಒಂದೇ ಸ್ವರೂಪ ಹೊಂದಿದ್ದ ಆ ಎರಡೂ ಎತ್ತರವಾದ ಹೆಬ್ಬಲಸಿನ ಮರಗಳ ಹಣ್ಣುಗಳು ಸಹ ಒಂದೇ ರೀತಿ. ಆ ಎರಡು ಮರಗಳನ್ನು ದಾಟಿ, ತುಸು ಮುಂದಕ್ಕೆ ನಡೆದರೆ ಇನ್ನೆರಡು ಹೆಬ್ಬಲಸಿನ ಮರಗಳವೆ. ಇವೆರಡರದ್ದೂ ಅವಳಿ-ಜವಳಿ ಸ್ವರೂಪ; ಎತ್ತರ 30 ಅಡಿಗಿಂತ ಕಡಿಮೆ. ಮೊದಲ ಹದಿನೈದು ಅಡಿಗಳೇನೇ ರೆಂಬೆ ಕೊಂಬೆಗಳು ಚಿಪಿಲು ಒಡೆದಿದ್ದವು; ದಪ್ಪವಾಗಿ ಬೆಳೆದ ಎಲೆಗಳ ಕ್ಯಾನೊಪಿ; ಆರಂಭದಲ್ಲಿ ಹೇಳಿದ, ಬೃಹದಾಕಾರದ ಎರಡು ಮರಗಳಿಂಗಿಂತಲೂ ಈ ಮರಗಳು ಮೇಲ್ನೋಟಕ್ಕ ಸ್ವರೂಪದಲ್ಲಿ ಸಾಕಷ್ಟು ಭಿನ್ನ. ಈ ಎರಡು ಮರಗ ಳೆಲ್ಲೂ ಪ್ರತಿವರ್ಷ ಸಾಕಷ್ಟು ಹಣ್ಣುಗಳಾದರೂ, ಇವಕ್ಕೆ ನಾವು ಮಕ್ಕಳು ಮುಗಿಬೀಳುವುದು ಕಡಿಮೆ. ತುಸು ಚಿಕ್ಕ ಗಾತ್ರದ ಹಣ್ಣು, ರುಚಿ ಪರವಾಗಿಲ್ಲ ಎನ್ನಬ ಹುದು, ಆದರೆ ಆ ದೊಡ್ಡ ಮರಗಳ ಹಣ್ಣಿನ ರುಚಿಗೆ ಸಾಟಿಯಲ್ಲ, ತೊಳೆಗಳ ಬಣ್ಣವು ತುಸು ಕೆಂಪು ಮಿಶ್ರಿತ.

ಕಡಿಮೆ ಎತ್ತರದ ಈ ಎರಡು ಮರಗಳಿಂದ ಕೊಕ್ಕೆ ಯಲ್ಲಿ ಬಡಿದು ಕಾಯಿ ಕೊಯ್ಯಬಹುದು. ಇದರ ಹತ್ತಿಪ್ಪತ್ತು ಕಾಯಿಗಳನ್ನು ಕೊಕ್ಕೆಯಿಂದ ಕೊಯ್ದು, ಮನೆಯ ಅಂಗಳಕ್ಕೆ ತಂದು, ಹುಲ್ಲು ಕುತ್ತಿ ಅಡಿ ಇರುವ ಜಾಗದಲ್ಲಿ ಇಡುತ್ತಿದ್ದೆವು. ಸಾಲಾರು ದಿನಗಳಲ್ಲಿ ಹಣ್ಣಾದಾಗ ತಿನ್ನುವ ಕಾರ್ಯಕ್ರಮ. ಆದರೆ, ಮರದಲ್ಲೇ ಆದ ಹಣ್ಣಿನ ರುಚಿ ಇವಕ್ಕಿಲ್ಲ. ನಮ್ಮೂರಿನ ಕಾಡಿನಂಚಿನಲ್ಲಿ ಅಲ್ಲಲ್ಲಿ ಹೆಬ್ಬಲಸಿನ ಮರ ಗಳಿವೆ. ಈ ಮರ ಬೆಳೆಯುವುದು ತುಂಬಾ ನಿಧಾನ. ಆದರೆ, ಒಮ್ಮೆ ಬೆಳೆದ ನಂತರ, ಇದರ ಮೋಜಿಗೆ, ಈ ಮರದ ಹಲಗೆಗೆ ಬಹಳ ಬೇಡಿಕೆ. ಬಾಗಿಲು, ಟೇಬಲ್, ಕುರ್ಚಿ ತಯಾರಿಸಲು ಹಲಸಿನ ಮರದ ಹಲಗೆಗಿಂತಲೂ, ಹೆಬ್ಬಲಸಿನ ಮರದ ಹಲಗೆ ಉತ್ತಮ ಎನ್ನುತ್ತಾರೆ ನಮ್ಮೂರಿನವರು.

ಹಲಸಿನ ಕಾಯಿಯಿಂದ ಸಾಂಬಾರು ಮಾಡಿದ ರೀತಿಯಲ್ಲೇ, ಹೆಬ್ಬಲಸಿನ ಕಾಯಿಯನ್ನು ಸಾಂಬಾರು ಮಾಡುವ ಪದ್ಧತಿ ಕೆಲವು ಕುಟುಂಬಗಳಲ್ಲಿದೆ. ಕೆಲವು ದಶಕಗಳ ಹಿಂದಿನ ತನಕ ಹೆಬ್ಬಲಸಿನ ಬೀಜಕ್ಕೆ ವಾಣಿಜ್ಯಕ ಮೌಲ್ಯ ಇತ್ತು; ನಮ್ಮೂರಿನ ಹೆಬ್ಬಲಸಿನ ಮರಗಳಲ್ಲಿ ಹಣ್ಣಾಗುವುದು ಬೇಸಗೆಯಲ್ಲಿ; ಜೂನ್ ಮೊದಲ ವಾರ ಮಳೆ ಬಿದ್ದ ನಂತರ, ಹೆಬ್ಬಲಸಿನ ಹಣ್ಣಿಗೆ ಬೇಡಿಕೆ ಇಲ್ಲ. ಆದರೆ, ಹಣ್ಣಿನೊಳಗಿರುವ ಪುಟಾಣಿ ಬೀಜ ಗಳನ್ನು ನಮ್ಮೂರಿನವರು ಮೂಟೆಗಟ್ಟಲೆ ಸಂಗ್ರಹಿಸಿ, ಚೆನ್ನಾಗಿ ಆರೆದು ಅಥವಾ ಜಜ್ಜಿ ಬೇಯಿಸಿ, ಅದರಿಂದ ಎಣ್ಣೆ ತೆಗೆಯುತ್ತಿದ್ದರು. ಅದು ಬಹು ಶ್ರಮದ ಕೆಲಸ. ಆಡುಗೆಗೂ ಈ ಎಣ್ಣೆಯ ಉಪಯೋಗವಿತ್ತು. ಕಾಡಿನಲ್ಲಿ ದೊರಕುವ ಈ ಹಣ್ಣಿನ ಬೀಜಗಳಿಂದ ಖಾದ್ಯತೈಲ ತಯಾರಿಸುವ ಪದ್ಧತಿ ಈಗ ಸಂಪೂರ್ಣ ಮರೆಯಾಗಿದೆ. ತಲೆ ಕೂದಲಿಗೆ, ಮೈಗೆ, ಕೋಣಗಳ ಬೆನ್ನಿಗೆ ಹಚ್ಚಲು ಸಹ ಇದರ ಎಣ್ಣೆಯನ್ನು ಉಪಯೋಗಿಸುವುದುಂಟು.

ಹಲಸಿನ ಮರವನ್ನು ಹೋಲುವ, ಆದರೆ ವಿಭಿನ್ನ ಪ್ರಭೇದದ ಹೆಬ್ಬಲಸು ಕರಾವಳಿ ಮತ್ತು ಮಲೆನಾಡಿಗೆ ಮಾತ್ರ ಸೀಮಿತವಾಗಿದ್ದೇಕೆಂದು ನನಗಿನ್ನೂ ಸ್ಪಷ್ಟವಾಗಿಲ್ಲ; ಬಹುಶಃ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಮಾತ್ರ ಬೆಳೆಯುತ್ತದೋ ಏನೋ. ಅದರ ದೊಡ್ಡಣ್ಣ ನಾಗಿರುವ ಹಲಸು, ನಮ್ಮ ರಾಜ್ಯದಾದ್ಯಂತ ಹರಡಿದೆ, ಅದರ ಹಣ್ಣು ಜನಪ್ರಿಯವಾಗಿದೆ. ಸಖರಾಯ ಪಟ್ಟಣ, ಕನಕಪುರ, ಹೊಳೆನರಸೀಪುರ, ಕೋಲಾರ ಮೊದಲಾದ ಕಡೆಯ ಹಲಸಿನ ಹಣ್ಣುಗಳ ರುಚಿ ಬಹು ಪ್ರಖ್ಯಾತ. ಮಲೆನಾಡಿನ ಹಣ್ಣುಗಳಿಗಿಂತ, ಬಯಲು ಸೀಮೆಯ ಹಣ್ಣುಗಳಿಗೆ ರುಚಿ ಜಾಸ್ತಿ. ಆದರೆ, ಹೆಬ್ಬಲಸು ಮಾತ್ರ ಮಲೆನಾಡನ್ನು ದಾಟಿ ಬಯಲು ಸೀಮೆಗೆ ಬರಲೇ ಇಲ್ಲ; ಆದ್ದರಿಂದಲೇ ನಮ್ಮ ರಾಜ್ಯದ ಬಹುಪಾಲು ಜನರಿಗೆ ಹೆಬ್ಬಲಸು ಇಂದಿಗೂ ಅಪರಿಚಿತ.

28-02-2025
Viswavani Pg 07

ಕಲ್ಲಂಗಡಿ ಹಣ್ಣಿನಲ್ಲಿ ಕೃತಕ ಬಣ್ಣ ಮಿಶ್ರಣ?

ಆಹಾರ ಸುರಕ್ಷತಾ ಇಲಾಖೆಯಿಂದ ತಪಾಸಣೆ | ಸತ್ಯಾಸತ್ಯತೆ ಪರಿಶೀಲನೆಗೆ ಬೆಂ.ಗ್ರಾ. ಜಿಲ್ಲಾಡಳಿತ ಆದೇಶ

■ ಶಿವರಾಜ ಎಂ. ಬೆಂಗಳೂರು ಗ್ರಾಮಾಂತರ

ಬಿಸಿಲಿನ ಬೇಗೆ ಹೆಚ್ಚಾಗಿದ್ದು, ಎಲ್ಲೆಡೆ ಕಲ್ಲಂಗಡಿ ಹಣ್ಣಿನ ವ್ಯಾಪಾರ ಜೋರಾಗಿದೆ. ಮಾರುಕಟ್ಟೆಗಳಲ್ಲಿ ರಸ್ತೆಬದಿಗಳಲ್ಲಿ ರಾಶಿಗಟ್ಟಲೆ ಕಲ್ಲಂಗಡಿ ಕಂಡುಬರುತ್ತಿದೆ. ದಾರಿಯಲ್ಲಿ ಸಾಗುವ ಯಾರೇ ಆದರೂ ಕಲ್ಲಂಗಡಿ ಚೂರನ್ನು ತಿನ್ನದೆ ಮುಂದೆ ಹೆಜ್ಜೆ ಇಡುವುದಿಲ್ಲ ಎಂಬಂತೆ ಬೇಸಿಗೆ ನೆತ್ತಿ ಸುಡುತ್ತಿದೆ. ಇದರ ನಡುವೆ ಕಲ್ಲಂಗಡಿಗೆ ಕೃತಕ ಬಣ್ಣ ಬಳಸುತ್ತಿದ್ದಾರೆ ಎಂಬ ಸುದ್ದಿ ಕಾಡ್ಗಿಚ್ಚಿನಂತೆ ಹರಡುತ್ತಿದ್ದು, ಸತ್ಯಾಸತ್ಯತೆ ಪರಿಶೀಲನೆಗೆ ಜಿಲ್ಲಾಡಳಿತ ಮುಂದಾಗಿದೆ.

ಬೇಸಿಗೆ ಕಾಲ ಶುರುವಾಗುತ್ತಿದ್ದಂತೆ ಕಲ್ಲಂಗಡಿ ಹಣ್ಣಿಗೆ ಬೇಡಿಕೆ ಜಾಸ್ತಿಯಾಗುತ್ತದೆ. ಕಲ್ಲಂಗಡಿಯಲ್ಲಿ ಹೆಚ್ಚು ನೀರಿನಾಂಶ ಇರುವುದರಿಂದ ದೇಹದಲ್ಲಿ ನಿರ್ಜಲೀಕರಣ ಆಗದಂತೆ ನೋಡಿಕೊಳ್ಳುವುದರ ಜತೆಗೆ ದೇಹಕ್ಕೆ ತಂಪು ನೀಡುತ್ತದೆ. ಈ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಕಲ್ಲಂಗಡಿ ಹಣ್ಣಿನ ವ್ಯಾಪಾರ ಜೋರಾಗಿದೆ. ಗ್ರಾಹಕರು ಸಹ ಮುಗಿಬಿದ್ದು ಕಲ್ಲಗಂಡಿ ಖರೀದಿಸಿ ಸೇವಿಸುತ್ತಿದ್ದಾರೆ. ಇದರ ನಡುವೆ ಕೃತಕ ಬಣ್ಣದ ಸುದ್ದಿ ಸದ್ದು ಮಾಡುತ್ತಿದ್ದು ಆತಂಕಕ್ಕೆ ಕಾರಣವಾಗಿದೆ.

ಕೆಮಿಕಲ್ ಕಲ್ಲಂಗಡಿ?: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹಕ್ಕಿಜ್ವರದ ಆತಂಕದ ಕಾಡುತ್ತಿದ್ದು, ಗ್ರಾಮಾಂತರ ಜಿಲ್ಲಾಡಳಿತವೂ ಅಲರ್ಟ್ ಆಗಿದೆ. ಇದರ ಬೆನ್ನಲ್ಲೇ ನಕಲಿ ಕಲ್ಲಂಗಡಿ ಹಣ್ಣುಗಳು ಜಿಲ್ಲೆಯ ಹಲವು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ ಎನ್ನಲಾಗಿದ್ದು, ಕೆಮಿಕಲ್ ಕಲ್ಲಂಗಡಿ ಸೇವಿಸಿದರೆ ಆನಾರೋಗ್ಯಕ್ಕೆ ತುತ್ತಾಗುವ ಆತಂಕ ಎದುರಾಗಿದೆ ಎಂಬ ಮಾತುಗಳು ಹರಿದಾಡುತ್ತಿರುವುದರಿಂದ ಜಿಲ್ಲಾಡಳಿತ ಮುಂಜಾಗ್ರತಾ ಕ್ರಮಕ್ಕೆ ಮುಂದಾಗಿದೆ.



ಮಾದರಿ ಸಂಗ್ರಹ

ಜಿಲ್ಲಾ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಕೆಲವು ಕಡೆಗಳಲ್ಲಿ ಕಲ್ಲಂಗಡಿ ಮಾದರಿಯನ್ನು ಪಡೆದು ಪರೀಕ್ಷೆಗೆ ಕಳುಹಿಸಿ ಕೊಡಲಾಗಿದೆ. ವರದಿ ಬಂದ ನಂತರ ನಿಜಾಂಶ ತಿಳಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಾರುಕಟ್ಟೆಯಲ್ಲಿನ ಎಲ್ಲ ಹಣ್ಣುಗಳ ಮಾದರಿ ಸಗ್ರಹಿಸಿ ಕಳುಹಿಸಿಕೊಡುವುದು ಕಷ್ಟಸಾಧ್ಯ. ಈ ಹಿನ್ನೆಲೆಯಲ್ಲಿ ಶಂಕಾಸ್ಪದ ಹಣ್ಣುಗಳ ಮಾದರಿಯನ್ನಷ್ಟೇ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದ್ದಾರೆ.

ವಿಶೇಷ ಕಾರ್ಯಾಚರಣೆ

ಕೆಲವು ದಿನಗಳ ಹಿಂದಷ್ಟೆ ವಿಶೇಷ ಕಾರ್ಯಾಚರಣೆ ನಡೆಸಿದ್ದ ಜಿಲ್ಲಾ ಆಹಾರ ಇಲಾಖೆ ಅಧಿಕಾರಿಗಳು, ಹೋಟೆಲ್‌ಗಳಲ್ಲಿ ಇಡ್ಲಿಗಳನ್ನು ತಯಾರಿಸುವಾಗ ಪ್